CCE-II-RR/PR/NSR/NSPR(B)/999/8049

**B**

**ಜೂನ್ 2024 ರ ಪರೀಕ್ಷೆ - 2**
**JUNE 2024 EXAMINATION - 2**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 38 ]
Total No. of Questions : 38 ]

**CCE RR/PR/ NSR/NSPR**
**Reduced Syllabus**

Question Paper Serial No.

**ಸಂಕೇತ ಸಂಖ್ಯೆ : 85-K**
**Code No. : 85-K**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**
**(Regular Repeater / Private Repeater / NSR / NSPR)**

ದಿನಾಂಕ : 22. 06. 2024 ] [ Date : 22. 06. 2024
ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.
ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**22. 06. 2024**

**Tear here**

**I.** **ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** **8 × 1 = 8**

1. ದಿವಾನಿ ಅದಾಲತ್ ಎಂಬ ನಾಗರಿಕ ನ್ಯಾಯಾಲಯವನ್ನು ಸ್ಥಾಪಿಸಿದವರು

   (A) ಕಾರ್ನ್ ವಾಲೀಸ್

   (B) ವಾರನ್ ಹೇಸ್ಟಿಂಗ್ಸ್

   (C) ವೆಲ್ಲೆಸ್ಲಿ

   (D) ಡಾಲ್‌ಹೌಸಿ

2. ಎರಡನೇ ಆಂಗ್ಲೋ-ಮೈಸೂರು ಯುದ್ಧಕ್ಕೆ ಮುಖ್ಯ ಕಾರಣ

   (A) ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡದ್ದು

   (B) ಬ್ರಿಟಿಷರು ಶ್ರೀರಂಗಪಟ್ಟಣ ಒಪ್ಪಂದದ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದು

   (C) ಬ್ರಿಟಿಷರು ಕಾರವಾರ ಮತ್ತು ಕೊಯಮತ್ತೂರುಗಳನ್ನು ವಶಪಡಿಸಿಕೊಂಡದ್ದು

   (D) ಬ್ರಿಟಿಷರು ಮಂಗಳೂರು ಒಪ್ಪಂದದ ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದು

3. ಭಾರತದ ವಿದೇಶಾಂಗ ನೀತಿಯನ್ನು ರೂಪಿಸಿದವರು

(A) ಸರ್ದಾರ್ ವಲ್ಲಭಭಾಯಿ ಪಟೇಲ್

(B) ಡಾ. ಬಿ.ಆರ್. ಅಂಬೇಡ್ಕರ್

(C) ಮೋತಿಲಾಲ್ ನೆಹರು

(D) ಜವಾಹರಲಾಲ್ ನೆಹರು

4. ಭಾರತದ ಅತ್ಯಂತ ಹಳೆಯ ಬಂದರು

(A) ವಿಶಾಖಪಟ್ಟಣ

(B) ಮರ್ಮಗೋವಾ

(C) ಚೆನ್ನೈ

(D) ನವಮಂಗಳೂರು

5. ನಮ್ಮ ಸಂವಿಧಾನದ 17ನೇ ವಿಧಿಯ ಮಹತ್ವ

(A) ಬಾಲಕಾರ್ಮಿಕರ ನಿಷೇಧ

(B) ಅಸ್ಪೃಶ್ಯತೆಯ ನಿವಾರಣೆ

(C) ಅನಕ್ಷರತೆಯ ನಿವಾರಣೆ

(D) ವರದಕ್ಷಿಣೆಯ ನಿಷೇಧ

6. ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ್ದವರು

(A) ಮೇಧಾ ಪಾಟ್ಕರ್

(B) ಸುಂದರ್‌ಲಾಲ್ ಬಹುಗುಣ

(C) ಡಾ. ಶಿವರಾಮ ಕಾರಂತ

(D) ಶ್ಯಾಮಾಜಿ ಕೃಷ್ಣವರ್ಮ

7. 'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು

(A) ಅಮರ್ತ್ಯ ಸೇನ್

(B) ಮಹಾತ್ಮ ಗಾಂಧೀಜಿ

(C) ದಾದಾಬಾಯಿ ನವರೋಜಿ

(D) ಸಿ.ಆರ್. ದಾಸ್

8. ರಮೇಶ ಎಂಬ ವ್ಯಕ್ತಿಗೆ ಐದು ವರ್ಷದ ಮಗಳಿದ್ದಾಳೆ. ಆತನು ಭವಿಷ್ಯದಲ್ಲಿ ಅವಳ ವಿವಾಹಕ್ಕೆ ಹಣವನ್ನು ಉಳಿತಾಯ ಮಾಡಲು ನಿರ್ಧರಿಸುತ್ತಾನೆ. ಹಾಗಾದರೆ ಅವನು ತೆರೆಯಬೇಕಾದ ಸೂಕ್ತವಾದ ಬ್ಯಾಂಕ್ ಖಾತೆ

(A) ಉಳಿತಾಯ ಖಾತೆ

(B) ಚಾಲ್ತಿ ಖಾತೆ

(C) ಆವರ್ತ ಠೇವಣಿ ಖಾತೆ

(D) ನಿಶ್ಚಿತ ಠೇವಣಿ ಖಾತೆ

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

9. 'ಸತ್ಯಾರ್ಥ ಪ್ರಕಾಶ' ಎಂಬ ಕೃತಿಯನ್ನು ರಚಿಸಿದವರು ಯಾರು ?

10. ಫ್ರಾನ್ಸಿಸ್ಕೊ ಡಿ ಆಲ್ಮೇಡ ನೀಲಿ ನೀರಿನ ನೀತಿಯನ್ನು ಏಕೆ ಜಾರಿಗೆ ತಂದನು ?

11. ಸಾಮಾಜಿಕ ಸ್ತರವಿನ್ಯಾಸವು ಹೇಗೆ ರೂಪುಗೊಂಡಿದೆ ?

12. ಕೋಮುವಾದ ಎಂದರೇನು ?

13. ಮುಂಬೈಯನ್ನು 'ಭಾರತದ ಮ್ಯಾಂಚೆಸ್ಟರ್' ಎಂದು ಕರೆಯಲಾಗಿದೆ. ಏಕೆ ?

14. ಮಾರ್ಚ್‌ನಿಂದ ಮೇ ಅವಧಿಯಲ್ಲಿ ಭಾರತದ ಉಷ್ಣಾಂಶವು ಏಕೆ ಹೆಚ್ಚಾಗಿರುತ್ತದೆ ?

15. ಅಧಿಕಾರ ವಿಕೇಂದ್ರೀಕರಣ ಎಂದರೇನು ?

16. ಭಾರತೀಯ ರಿಸರ್ವ್ ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕ್ ಎಂದು ಏಕೆ ಕರೆಯುತ್ತಾರೆ ?

**III.** ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : **8 × 2 = 16**

17. ಭಾರತದ ವಿದೇಶಾಂಗ ನೀತಿಯ ಉದ್ದೇಶಗಳಾವವು ?

**ಅಥವಾ**

ನಿರುದ್ಯೋಗ ಸಮಸ್ಯೆಗೆ ಕಾರಣಗಳೇನು ?

18. ಅಪ್ಪಿಕೋ ಚಳವಳಿಯನ್ನು ವಿವರಿಸಿ.

**ಅಥವಾ**

ಸಾಮಾಜಿಕ ಸ್ತರವಿನ್ಯಾಸದ ವಿವಿಧ ರೂಪಗಳನ್ನು ವಿವರಿಸಿ.

19. ಮೊದಲನೆಯ ಆಂಗ್ಲೋ-ಮರಾಠ ಯುದ್ಧಕ್ಕೆ ಕಾರಣಗಳೇನು ?

20. ಜುನಾಗಢ್ ಸಂಸ್ಥಾನವು ಭಾರತದ ಒಕ್ಕೂಟಕ್ಕೆ ಹೇಗೆ ಸೇರ್ಪಡೆಯಾಯಿತು ?

21. ಇತ್ತೀಚಿನ ವರ್ಷಗಳಲ್ಲಿ ಮಣ್ಣಿನ ಸವೆತವು ಅಧಿಕವಾಗುತ್ತಿದೆ. ಏಕೆ ?

22. ಭಾರತದಲ್ಲಿ ನೀರಾವರಿ ಅತ್ಯವಶ್ಯಕ. ಏಕೆ ?

23. ದೇಶದ ಅಭಿವೃದ್ಧಿಯನ್ನು ಅಳೆಯಲು ತಲಾ ವರಮಾನವು ನೈಜಮಾಪಕವಲ್ಲ. ಏಕೆ ?

24. ಪ್ರತಿವರ್ಷವು ಮಾರ್ಚ್ 15 ರಂದು ವಿಶ್ವಗ್ರಾಹಕರ ಹಕ್ಕುಗಳ ದಿನವನ್ನು ಆಚರಿಸಲಾಗುತ್ತದೆ. ಏಕೆ ?

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**9 × 3 = 27**

25. ಕಿತ್ತೂರಿನ ಚೆನ್ನಮ್ಮನೊಂದಿಗೆ ಸಂಗೊಳ್ಳಿ ರಾಯಣ್ಣನ ಹೆಸರೂ ಆದರ್ಶಪ್ರಾಯವೆನಿಸಿದೆ. ಹೇಗೆ ?

**ಅಥವಾ**

ಭಾರತದ ಸಾಮಾಜಿಕ ಸುಧಾರಣೆಯಲ್ಲಿ ರಾಜಾ ರಾಮ್‌ಮೋಹನ್ ರಾಯ್‌ರ ಪಾತ್ರವು ಸ್ಮರಣೀಯವಾದುದು. ಸಮರ್ಥಿಸಿ.

26. ಭಾರತದಲ್ಲಿ ಅನುಸರಿಸುವ ವ್ಯವಸಾಯದ ವಿಧಗಳನ್ನು ಪಟ್ಟಿ ಮಾಡಿ.

**ಅಥವಾ**

ಭಾರತದ ಕೈಗಾರಿಕಾ ವಲಯಗಳನ್ನು ಪಟ್ಟಿ ಮಾಡಿ.

27. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳು ಮಹತ್ವದ ಪಾತ್ರವಹಿಸುತ್ತವೆ. ದೃಢೀಕರಿಸಿ.

**ಅಥವಾ**

ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ. ಸಮರ್ಥಿಸಿ.

28. ಬ್ಯಾಂಕ್‌ಗಳು ನಿರ್ವಹಿಸುವ ಕಾರ್ಯಗಳಾವವು ?

**ಅಥವಾ**

ಬ್ಯಾಂಕಿನ ಗುಣಲಕ್ಷಣಗಳಾವವು ?

29. ಅಸಹಕಾರ ಚಳವಳಿಯ ಪ್ರಮುಖ ಕಾರ್ಯಕ್ರಮಗಳಾವವು ?

30. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಕಾರಣವಾದ ಅಂಶಗಳಾವುವು ?

31. ರಷ್ಯಾವು ಭಾರತಕ್ಕೆ ಹಲವು ಸಂದರ್ಭಗಳಲ್ಲಿ ಸಹಕರಿಸುತ್ತಾ ಬಂದಿದೆ. ಹೇಗೆ ?

32. ಸಂಘಟಿತ ವಲಯದ ದುಡಿಮೆಗಾರನಿಗಿರುವ ಸೌಲಭ್ಯಗಳಾವವು ?

33. ಅರಣ್ಯ ಸಂರಕ್ಷಣಾ ವಿಧಾನಗಳನ್ನು ವಿವರಿಸಿ.

**V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**4 × 4 = 16**

34. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳ ಪಾತ್ರವನ್ನು ವಿವರಿಸಿ.

**ಅಥವಾ**

ಭಾರತದಲ್ಲಿ ಬ್ರಿಟಿಷ್ ಶಿಕ್ಷಣದ ಪರಿಣಾಮಗಳನ್ನು ವಿವರಿಸಿ.

35. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಹಲವು ಕಾರಣಗಳಿಂದ ವಿಫಲವಾಯಿತು. ಸ್ಪಷ್ಟೀಕರಿಸಿ.

36. ಮಹಿಳೆಯರ ಸ್ಥಾನಮಾನವನ್ನು ಉತ್ತಮಪಡಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳಾವವು ?

37. ಭೂಕಂಪಕ್ಕೆ ಕಾರಣಗಳು ಮತ್ತು ಅದರ ಪರಿಣಾಮಗಳನ್ನು ತಿಳಿಸಿ.

VI. 38. ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : **1 + 4 = 5**

a) ಕಾಂಡ್ಲಾ

b) ಕೊಂಕಣ ತೀರ

c) ಹಿರಾಕುಡ್ ಯೋಜನೆ

d) ಅಮೃತ್‌ಸರ್

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆಸಂಖ್ಯೆ 38 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. **5**

DO NOT WRITE ANYTHING HERE